ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ಕಛೇರಿಯಲ್ಲಿ ದಿನಾಂಕ: 07-12-2020 ರಂದು ನಡೆದ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಐ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಡಿಸೆಂಬರ್-2020 ರ ಮಾಹೆಯ ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದೊಮ್ಮಲೂರು ವಾರ್ಡಿನ ಕೇಂಬ್ರಿಡ್ಜ್ ಬಡಾವಣೆಯ ಸೋಮೇಶ್ವರಪುರ ಕ್ಷೇಮಾಭಿವೃದ್ಧಿ ಸಂಘದ ಕಟ್ಟಡದಲ್ಲಿ ದಿನಾಂಕ: 07-12-2020 ರಂದು ನಡೆಸಲಾಯಿತು. ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಸನ್ಮಾನ್ಯ ಶ್ರೀ. ಎನ್.ಎ. ಹ್ಯಾರೀಸ್ ರವರು | ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ |
| 2 | ಟಿ. ಡಿ. ಮಂಜುನಾಥ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು ವಾರ್ಡ್-112 (ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ) |
| 3 | ಎನ್.ಎಸ್. ಪ್ರಕಾಶ್ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 112 |
| 4 | ಆರ್. ಮಧು | ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ |
| 5 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 6 | ಆರ್. ಜಗದೀಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 7 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 8 | ರೇಣುಕಾ ಸ್ವಾಮಿ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ನೀರುಗಾಲುವೆ-ಪೂರ್ವ |
| 9 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 10 | ರಂಗಯ್ಯ ಟಿ.ಎಸ್. | ಸಹಾಯಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 11 | ಪುರುಷೋತ್ತಮ | ಸಮಿತಿ ಸದಸ್ಯರು & ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 12 | ಮಹಾದೇವಯ್ಯ ಎಸ್ | ಇಂದಿರಾನಗರ ಪೋಲೀಸ್ ಠಾಣೆ |

| | | |
|---|---|---|
| 13 | ಪ್ರಭಾ ಎಂ. ವಿ | ಸಹಾಯಕ ಅಭಿಯಂತರರು,<br>ಇ-6 ಉಪ ವಿಭಾಗ, ಬೆಸ್ಕಾಂ |
| 14 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| 15 | ಶಶಿಕುಮಾರ್ | ಕೆಲಸ ಪರಿವೀಕ್ಷಕರು<br>ವಾರ್ಡ್ ಸಂಖ್ಯೆ: 112 |
| 16 | ಗಾಯತ್ರಿ | ಟೈಲರಿಂಗ್ ಶಿಕ್ಷಕರು,<br>ವಾರ್ಡ್ ಸಂಖ್ಯೆ: 112 ದೊಮ್ಮಲೂರು, ಬಿಬಿಎಂಪಿ |
| 17 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 18 | ಮಹಾದೇವ | ಕಂದಾಯ ವಸೂಲಿಗಾರರು ವಾರ್ಡ್ ಸಂಖ್ಯೆ: 112 |
| 19 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು<br>ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| 20 | ಬಸವರಾಜ್ ಕೆ | ಪೋಲೀಸ್ ಸಬ್‌ಇನ್ಸ್‌ಪೆಕ್ಟರ್,<br>ಹಲಸೂರು ಪೋಲೀಸ್ ಠಾಣೆ |
| 21 | ಬಿ. ಚಂದ್ರಶೇಖರ್ | ಸಹಾಯಕ ಅಭಿಯಂತರರು<br>ಬೃಹತ್ ನೀರುಗಾಲುವೆ |
| 22 | ಅಮರೇಶ್ | ಹಲಸೂರು ಪೋಲೀಸ್ ಠಾಣೆ |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು** | | |
| 1 | ಕಲ್ಯಾಣಿ | ವಾರ್ಡ್ ಸಮಿತಿ ಸದಸ್ಯರು |
| 2 | ಪಿ. ಕುಮಾರ್ | ವಾರ್ಡ್ ಸಮಿತಿ ಸದಸ್ಯರು |
| 3 | ಪುಲಿಕೇಶಿ ರೆಡ್ಡಿ | ವಾರ್ಡ್ ಸಮಿತಿ ಸದಸ್ಯರು |
| 4 | ವಾಸು | ವಾರ್ಡ್ ಸಮಿತಿ ಸದಸ್ಯರು |

ದಿನಾಂಕ: 07-12-2020 ರಂದು ಮಧ್ಯಾಹ್ನ 2-00 ಗಂಟೆಗೆ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಉಪಸ್ಥಿತಿಯಲ್ಲಿ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಎನ್. ಎಸ್. ಪ್ರಕಾಶ್, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ಸನ್ಮಾನ್ಯ ಶಾಸಕರನ್ನು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡಿನಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರಾಗಳ ನಿಯಂತ್ರಣ ಮತ್ತು ನಿರ್ವಹಣೆಯನ್ನು ಪೋಲೀಸ್ ಇಲಾಖೆಗೆ ಹಸ್ತಾಂತರಿಸುವ ಕುರಿತು.
2. ಸಿದ್ಧಾರ್ಥನಗರದಲ್ಲಿರುವ ಹಳೆಯ ವಿದ್ಯುತ್ ಕಂಬಗಳ ಬದಲಾವಣೆಯ ಕುರಿತು.
3. ಸಿದ್ಧಾರ್ಥನಗರದ ನಿವಾಸಿಗಳಿಗೆ ನೀರಿನ ತೊಂದರೆ.
4. ದೊಮ್ಮಲೂರು ಬಡಾವಣೆಯ 2ನೇ ಮುಖ್ಯರಸ್ತೆಯಲ್ಲಿ UGD ಸಮಸ್ಯೆ ಮತ್ತು 3ನೇ ಮುಖ್ಯರಸ್ತೆ ಕುಸಿಯುತ್ತಿರುವ ಬಗ್ಗೆ.
5. ದೊಮ್ಮಲೂರು ಬಡಾವಣೆಯಲ್ಲಿರುವ ಬೃಹತ್ ನೀರುಗಾಲುವೆ ಬಗ್ಗೆ.
6. ವಾರ್ಡಿನಲ್ಲಿ ಹೆಚ್ಚುತ್ತಿರುವ ಸರಗಳ್ಳತನ ಮತ್ತು ಮೊಬೈಲ್ ಕಳ್ಳತನಗಳ ಕುರಿತು.
7. ಬೀದಿ ದೀಪಗಳ ನಿರ್ವಹಣೆ ಬಗ್ಗೆ.
8. ಕೇಂಬ್ರಿಡ್ಜ್ ಬಡಾವಣೆಯಲ್ಲಿ ಮಳೆಗಾಲದಲ್ಲಿ ಸಂಭವಿಸುತ್ತಿರುವ flooding ಸಮಸ್ಯೆ ಬಗ್ಗೆ.
9. ಪಾರ್ಕ್‌ಗಳಲ್ಲಿ ಮರಗಳ ಟ್ರಿಮ್ಮಿಂಗ್ ಮಾಡುವ ಬಗ್ಗೆ ಮತ್ತು Pathway ಸರಿಪಡಿಸುವ ಬಗ್ಗೆ.
10. ಬಿ.ಡಿ.ಎ. ಬಡಾವಣೆ ಪ್ರದೇಶದಲ್ಲಿ ಅಳವಡಿಸಿರುವ Garbage Dustbin ತೆರವುಗೊಳಿಸುವ ಬಗ್ಗೆ.
11. ವಾರ್ಡ್‌ನಲ್ಲಿ ಅಳವಡಿಸಿರುವ ನಾಮಫಲಕಗಳಲ್ಲಿ ಹೆಸರುಗಳನ್ನು ಹಾಕಿರುವ ಬಗ್ಗೆ ಮತ್ತು ಪಾರ್ಕ್ ಮತ್ತು ಪಾಲಿಕೆಯ ಜಾಗಗಳಿಗೆ ಹೆಸರುಗಳನ್ನು ನಾಮಕರಣ ಮಾಡುವ ಬಗ್ಗೆ.
12. ಸಾರ್ವಜನಿಕ ಶೌಚಾಲಯ ನಿರ್ಮಾಣ ಮತ್ತು ಪಾದಚಾರಿ ಮಾರ್ಗ (Footpath) ಅಭಿವೃದ್ಧಿಗೆ ಅವಶ್ಯ ಅನುದಾನಪ ನೀಡುವ ಬಗ್ಗೆ.

## ಸಭೆಯ ನಡಾವಳಿಗಳು

1. ವಾರ್ಡಿನಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರಾಗಳ ನಿಯಂತ್ರಣ ಮತ್ತು ನಿರ್ವಹಣೆಯನ್ನು ಪೋಲೀಸ್ ಇಲಾಖೆಗೆ ಹಸ್ತಾಂತರಿಸುವ ಕುರಿತು.

ದೊಮ್ಮಲೂರು ವಾರ್ಡಿನ ನಿವಾಸಿಗಳು ಈ ಹಿಂದಿನ ಸಭೆಗಳಲ್ಲಿ ಮತ್ತು ಇಂದಿನ ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಿದ ವಿಷಯವು ಸಿ.ಸಿ. ಕ್ಯಾಮರಾಗಳ ನಿರ್ವಹಣೆಯ ಕುರಿತು. ಈ ಕುರಿತು ಸಭೆಗೆ ಬಂದಿದ್ದ, ಪಾಲಿಕೆಯ ವಿದ್ಯುತ್ ವಿಭಾಗ ಸಹಾಯಕ ಅಭಿಯಂತರರಾದ ಶ್ರೀ. ಮಂಜಪ್ಪ ರವರು ಮಾತನಾಡಿ ದೊಮ್ಮಲೂರು ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರಾಗಳ ನಿರ್ವಹಣೆಯನ್ನು ಗುತ್ತಿಗೆದಾರರಾದ ಅಬ್ದುಲ್ ರವರು ನಿರ್ವಹಿಸುತ್ತಿದ್ದು, ಇದಕ್ಕಾಗಿ ದೊಮ್ಮಲೂರು ಬಸ್ ಸ್ಟ್ಯಾಂಡ್ ಹತ್ತಿರ ಕಂಟ್ರೋಲ್ ರೂಂ ಸಹ ಸ್ಥಾಪಿಸಲಾಗಿರುತ್ತದೆ ಎಂದು ತಿಳಿಸಿದರು. ಈ ಸ್ಥಳವನ್ನು ಪರಿಶೀಲಿಸಿದ ಪೋಲೀಸ್ ಇಲಾಖೆಯವರು ಸದರಿ ಕಂಟ್ರೋಲ್ ರೂಂನ್ನು ಬೇರೆಡೆ ಸ್ಥಾಪಿಸಲು ಸೂಚಿಸಿದರೆಂದು ಸಭೆಗೆ ತಿಳಿಸಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಶಾಸಕರು, ಸಿ.ಸಿ. ಕ್ಯಾಮರಾಗಳ ಬಗ್ಗೆ ಪೋಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಪೋಲೀಸ್ ಇಲಾಖೆಯವರು ಸೂಚಿಸುವ ಕಡೆ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿರ್ವಹಿಸಿಕೊಡುವಂತೆ ಸೂಚಿಸಿದರು.

2. **ಸಿದ್ಧಾರ್ಥನಗರದಲ್ಲಿರುವ ಹಳೆಯ ವಿದ್ಯುತ್ ಕಂಬಗಳ ಬದಲಾವಣೆಯ ಕುರಿತು.**

ದೊಮ್ಮಲೂರು ಬಡಾವಣೆಯ ಸಿದ್ಧಾರ್ಥನಗರ ಪ್ರದೇಶದಲ್ಲಿ ಹಲುವ ಹಳೆಯ ವಿದ್ಯುತ್ ಕಂಬಗಳಿದ್ದು, ಇವುಗಳು ದುಸ್ಥಿತಿಯಲ್ಲಿದ್ದು ಅವಘಡ ಸಂಭವಿಸುವ ಮೊದಲೇ ಬದಲಾಯಿಸಬೇಕೆಂದು ಕೋರಿದರು. ಹಾಗೂ ಈ ಬಗ್ಗೆ ಬೆಸ್ಕಾಂ ಇಂಜಿನಿಯರ್‌ಗೂ ಸಹ ಮಾಹಿತಿ ನೀಡಲಾಗಿದೆ ಎಂದು ಸಮಿತಿ ಸದಸ್ಯರಾದ ಕುಮಾರ್ ರವರು ತಿಳಿಸಿದರು.

ಈ ಬಗ್ಗೆ ಮಾತನಾಡಿದ ಬೆಸ್ಕಾಂ ಇಲಾಖೆಯ ಅಧಿಕಾರಿಗಳು, ಕೂಡಲೇ ಕ್ರಮಕೈಗೊಂಡು ಹಳೆಯ ವಿದ್ಯುತ್ ಕಂಬಗಳನ್ನು ಬದಲಾಯಿಸಲಾಗುವುದು ಎಂದರು. ಹಾಗೂ ಮಾನ್ಯ ಶಾಸಕರು ಮಾತನಾಡಿ ಮುಂದಿನ ವಾರ್ಡ್ ಸಭೆಯ ಒಳಗೆ ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು.

3. **ಸಿದ್ಧಾರ್ಥನಗರದ ನಿವಾಸಿಗಳಿಗೆ ನೀರಿನ ತೊಂದರೆ.**

ಸಮಿತಿ ಸದಸ್ಯರಾದ ಕುಮಾರ್ ರವರು ಮಾತನಾಡಿ ದೊಮ್ಮಲೂರು ಬಡಾವಣೆಯ ಸಿದ್ಧಾರ್ಥನಗರ ಪ್ರದೇಶದ ನಿವಾಸಿಗಳು ನೀರಿನ ಸಮಸ್ಯೆಯನ್ನು ಅನುಭವಿಸುತ್ತಿರುತ್ತಾರೆ. ಸಮಸ್ಯೆ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳನ್ನು ವಿಚಾರಿಸಿದರೆ ಮೀಟರ್ ಅಳವಡಿಸಿಕೊಂಡಲ್ಲಿ ಮಾತ್ರ ನೀರು ಸರಬರಾಜು ಸರಿಪಡಿಸಲಾಗುತ್ತದೆ ಎಂದು ತಿಳಿಸಿರುತ್ತಾರೆಂದು ಸಭೆಯಲ್ಲಿ ಹೇಳಿದರು.

ಈ ಬಗ್ಗೆ ಮಾತನಾಡಿದ ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಾದ ಮಮತ ರವರು ಮಾತನಾಡಿ, ಪೈಪ್‌ಲೈನ್ ಸಮಸ್ಯೆಯಿಂದ ನೀರಿನ ಸಮಸ್ಯೆ ಆಗಿರುತ್ತದೆ. ಹಾಗೂ ಸಿದ್ಧಾರ್ಥನಗರದಲ್ಲಿ ಹಲವಾರು ಮನೆಗಳಿಗೆ ಮೀಟರ್ ಅಳವಡಿಸಿರುವುದಿಲ್ಲ, ಮೀಟರ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ನೀರಿನ ಸಮಸ್ಯೆ ಸಂಪೂರ್ಣವಾಗಿ ಸರಿಹೋಗುವುದೆಂದು ಸಭೆಗೆ ತಿಳಿಸಿದರು.

4. **ದೊಮ್ಮಲೂರು ಬಡಾವಣೆಯ 2ನೇ ಮುಖ್ಯರಸ್ತೆಯಲ್ಲಿ UGD ಸಮಸ್ಯೆ ಮತ್ತು 3ನೇ ಮುಖ್ಯರಸ್ತೆ ಕುಸಿಯುತ್ತಿರುವ ಬಗ್ಗೆ.**

ಶ್ರೀ. ಶ್ರೀನಿವಾಸರೆಡ್ಡಿ ರವರು ಮಾತನಾಡಿ ದೊಮ್ಮಲೂರು ಬಡಾವಣೆಯ 2ನೇ ಮುಖ್ಯರಸ್ತೆಯಲ್ಲಿ UGD ಸಮಸ್ಯೆ ಆಗಿದ್ದು ಕೂಡಲೇ ಪರಿಹರಿಸುವಂತೆ ಕೋರಿದರು. ಮತ್ತು ದೊಮ್ಮಲೂರು 3ನೇ ಮುಖ್ಯರಸ್ತೆಯು ಕುಸಿಯುತ್ತಿರುವುದನ್ನು ಸಭೆಯಲ್ಲಿ ಅಧಿಕಾರಿಗಳ ಗಮನಕ್ಕೆ ತಂದರು.

ಈ ಬಗ್ಗೆ ಮಾತನಾಡಿದ ಬೆಸ್ಕಾಂ ಇಲಾಖೆಯ ಅಧಿಕಾರಿಗಳು, 2ನೇ ಮುಖ್ಯರಸ್ತೆಯಲ್ಲಿ UGD ಕಾಮಗಾರಿ ನಿರ್ವಹಿಸಲು ಅಂದಾಜು ಪಟ್ಟಿ ಅನುಮೋದನೆ ಆಗಿದ್ದು, ಶೀಘ್ರವೇ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಮಾಹಿತಿ ನೀಡಿದರು. ಮತ್ತು 3ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರು ಸರಬರಾಜು ಪೈಪ್‌ಗಳನ್ನು ಮುಚ್ಚಿರುವ ಮಣ್ಣು ಕುಸಿಯುತ್ತಿರುವ ಬಗ್ಗೆ ಮಾನ್ಯ ಶಾಸಕರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮಕೈಗೊಂಡು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಮಸ್ಯೆ ಬಗೆಹರಿಸುವಂತೆ ಬಿ.ಬಿ.ಎಂ.ಪಿ. ಮತ್ತು ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

5. **ದೊಮ್ಮಲೂರು ಬಡಾವಣೆಯಲ್ಲಿರುವ ಬೃಹತ್ ನೀರುಗಾಲುವೆ ಬಗ್ಗೆ.**

ದೊಮ್ಮಲೂರು ಬಡಾವಣೆಯಲ್ಲಿರುವ ಬೃಹತ್ ನೀರುಗಾಲುವೆಯನ್ನು ರಕ್ಷಣಾ ಇಲಾಖೆಯ ಕಾಂಪೌಂಡ್‌ನಿಂದ ಇನ್ನರ್ ರಿಂಗ್ ರಸ್ತೆ ಮುಖಾಂತರ ಹಾದು ಹೋಗಿ ಚಲ್ಲಘಟ್ಟ ಕಾಲುವೆ ವರೆಗೆ ಕಾಲುವೆಯನ್ನು ಅಭಿವೃದ್ಧಿಪಡಿಸಬೇಕೆಂದು ಸಾರ್ವಜನಿಕರು ಸಭೆಯಲ್ಲಿ ಕೋರಿದರು.

ಈ ಬಗ್ಗೆ ಮಾನ್ಯ ಶಾಸಕರು, ಪಾಲಿಕೆಯ ಬೃಹತ್ ನೀರುಗಾಲುವೆ ವಿಭಾಗದ ಇಂಜಿನಿಯರ್ ರವರಿಗೆ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮಕೈಗೊಂಡು ವರದಿ ಸಲ್ಲಿಸುವಂತೆ ಮತ್ತು ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಸೂಚಿಸಿದರು.

6. **ವಾರ್ಡಿನಲ್ಲಿ ಹೆಚ್ಚುತ್ತಿರುವ ಸರಗಳ್ಳತನ ಮತ್ತು ಮೊಬೈಲ್ ಕಳ್ಳತನಗಳ ಕುರಿತು:**

ದೊಮ್ಮಲೂರು ವಾರ್ಡಿನಲ್ಲಿ ಇತ್ತೀಚೆಗೆ ಸರಗಳ್ಳತನ ಮತ್ತು ರಸ್ತೆಗಳಲ್ಲಿ ಮೊಬೈಲ್ ಕಳ್ಳತನಗಳ ಪ್ರಕರಣವು ಹೆಚ್ಚಾಗುತ್ತಿದ್ದು, ಪೋಲೀಸ್ ಇಲಾಖೆಯಿಂದ ಯಾವುದೇ ಕ್ರಮ ಆಗುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು. ಮತ್ತು ಶ್ರೀನಿವಾಸರೆಡ್ಡಿಯವರು ಮಾತನಾಡಿ ಇತ್ತೀಚೆಗೆ ದೊಮ್ಮಲೂರು ಮೇಲ್ಸೇತುವೆ ಹತ್ತಿರ ಸರಗಳ್ಳತನ ಆಗಿರುತ್ತದೆ ಎಂದು ತಿಳಿಸಿದರು ಮತ್ತು ದೊಮ್ಮಲೂರು 2ನೇ ಹಂತದ ನಿವಾಸಿಯಾದ ಶ್ರೀ. ಅಶೋಕ ಕುಮಾರ್ ರವರು ಮಾತನಾಡಿ ದೊಮ್ಮಲೂರು 2ನೇ ಹಂತದಲ್ಲಿ ಹಗಲು ಹೊತ್ತಿನಲ್ಲಿಯೇ ಸರಗಳ್ಳತನದಂತಹ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕೂಡಲೇ ವಾರ್ಡಿನಲ್ಲಿ ಪೋಲೀಸ್ ಇಲಾಖೆಯವ ಹೊಯ್ಸಳ ವಾಹನಗಳ ಬೀಟ್‌ಗಳನ್ನು ಹೆಚ್ಚಿಸುವಂತೆ ಕೋರಿದರು.

ಈ ಬಗ್ಗೆ ಮಾತನಾಡಿದ ಪೋಲೀಸ್ ಅಧಿಕರಿಗಳು, ಸರಗಳ್ಳತನ ಮಾಡುತಿರುವವರನ್ನು ಹಿಡಿಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಮತ್ತು ಮಾನ್ಯ ಶಾಸಕರು ವಾರ್ಡಿನಲ್ಲಿ ಹೊಯ್ಸಳ ವಾಹನದ ಬೀಟ್‌ಗಳನ್ನು ಹೆಚ್ಚಿಸುವಂತೆ ಪೋಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

7. **ಬೀದಿ ದೀಪಗಳ ನಿರ್ವಹಣೆ ಬಗ್ಗೆ:**

ದೊಮ್ಮಲೂರು ವಾರ್ಡಿನಲ್ಲಿ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲವೆಂದು ಸಾರ್ವಜನಿಕರು ತಿಳಿಸಿದರು ಮತ್ತು ಶ್ರೀ. ಅಶೋಕ ಕುಮಾರ್ ರವರು ಮಾತನಾಡಿ ದೊಮ್ಮಲೂರು 2ನೇ ಹಂತದ ರಸ್ತೆಯಲ್ಲಿ ಒಂದು ಕಡೆ LED ಲೈಟ್ ಅಳವಡಿಸಿ ಮತ್ತೊಂದು ಕಡೆ Sodium ಲೈಟ್‌ಗಳನ್ನು ಅಳವಡಿಸಿರುತ್ತಾರೆಂದು ಅಸಮದಾನ ವ್ಯಕ್ತಪಡಿಸಿದರು.

ಈ ಬಗ್ಗೆ ಮಾತನಾಡಿದ ಮಂಜಪ್ಪ, ಸಹಾಯಕ ಇಂಜಿನಿಯರ್ ರವರು ವಾರ್ಡಿನಲ್ಲಿರುವ ಬೀದಿ ದೀಪಗಳ ನಿರ್ವಹಣೆಗಾಗಿ ಹೊಸದಾಗಿ ಟೆಂಡರ್ ಕರೆಯಲಾಗಿದೆ, ಈ ಪ್ರಕ್ರಿಯೆ ಮುಗಿದ ಕೂಡಲೇ ಹೊಸ ಗುತ್ತಿಗೆದಾರರಿಂದ ವಾರ್ಡಿನಲ್ಲಿರುವ ಎಲ್ಲಾ ಬೀದಿ ದೀಪಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಮತ್ತು ಮಾನ್ಯ ಶಾಸಕರು ವಾರ್ಡಿನಲ್ಲಿ ಎಲ್ಲಾ LED ಲೈಟ್‌ಗಳನ್ನೇ ಅಳವಡಿಸುವಂತೆ ಸೂಚಿಸಿದರು. ಮತ್ತು ದೊಮ್ಮಲೂರು 2ನೇ ಹಂತದಲ್ಲಿ ಕೂಡಲೇ Sodium ಲೈಟ್‌ಗಳನ್ನು ಬದಲಾಯಿಸಿ LED ಲೈಟ್‌ಗಳನ್ನು ಅಳವಡಿಸುವಂತೆ ಸೂಚಿಸಿದರು.

8. **ಕೇಂಬ್ರಿಡ್ಜ್ ಬಡಾವಣೆಯಲ್ಲಿ ಮಳೆಗಾಲದಲ್ಲಿ ಸಂಭವಿಸುತ್ತಿರುವ flooding ಸಮಸ್ಯೆ ಬಗ್ಗೆ.**

ಕೇಂಬ್ರಿಡ್ಜ್ ಬಡಾವಣೆಯ ನಿವಾಸಿಗಳು ಮಾತನಾಡಿ ಮಳೆಗಾಲದಲ್ಲಿ 1ನೇ ಕ್ರಾಸ್ ಮತ್ತು 1ನೇ ಎ ಕ್ರಾಸ್‌ಗಳಲ್ಲಿ ಚರಂಡಿಯಲ್ಲಿ ನೀರು ಸರಾಗವಾಗಿ ಹರಿದು ಹೋಗದೇ ಮನೆಗಳಿಗೆ ನೀರು ನುಗ್ಗಿ ಬಹಳ ತೊಂದರೆಯಾಗುತ್ತಿದ್ದು, ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿದರು.

ಈ ಬಗ್ಗೆ ಮಾನ್ಯ ಶಾಸಕರು ಮಾತನಾಡಿ, ಈಗಾಗಲೇ ಕೇಂಬ್ರಿಡ್ಜ್ ಬಡಾವಣೆಯಲ್ಲಿ ಮಳೆ ನೀರಿನಿಂದ ಸಂಭವಿಸುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸಲಾಗಿದ್ದು, ಮಳೆ ನೀರು ಚರಂಡಿಯಲ್ಲಿ ಹೂಳು ತುಂಬಿಕೊಂಡಿದ್ದಲ್ಲಿ ಈ ಸಮಸ್ಯೆ ಉದ್ಭವಿಸಿರಬೇಕು, ಆದ್ದರಿಂದ ಕೂಡಲೆ ಚರಂಡಿಗಳ ಹೂಳನ್ನು ತೆಗೆದು ಚರಂಡಿ ನೀರು ಸರಾಗವಾಗಿ ಬೃಹತ್ ನೀರುಗಾಲುವೆಗೆ ಹರಿದು ಹೋಗುವಂತೆ ಕ್ರಮವಹಿಸುವಂತೆ ಪಾಲಿಕೆಯ ಇಂಜಿನಿಯರ್‌ಗಳಿಗೆ ಸೂಚಿಸಿದರು.

9. **ಪಾರ್ಕ್‌ಗಳಲ್ಲಿ ಮರಗಳ ಟ್ರಿಮ್ಮಿಂಗ್ ಮಾಡುವ ಬಗ್ಗೆ ಮತ್ತು Pathway ಸರಿಪಡಿಸುವ ಬಗ್ಗೆ.**

ದೊಮ್ಮಲೂರು ವಾರ್ಡಿನಲ್ಲಿರುವ ಉದ್ಯಾನವನಗಳಲ್ಲಿನ ಮರಗಳ ಟ್ರಿಮ್ಮಿಂಗ್ ಮಾಡಬೇಕಾಗಿರುತ್ತದೆ ಮತ್ತು ಪಾರ್ಕ್‌ಗಳಲ್ಲಿರುವ Pathway ಗಳು ಕಿತ್ತುಹೋಗಿದ್ದು, ಸರಿಪಡಿಸಿಕೊಡುವಂತೆ ದೊಮ್ಮಲೂರು ನಿವಾಸಿಗಳು ಕೋರಿದರು.

ಮಾನ್ಯ ಶಾಸಕರು ಪಾಲಿಕೆ ಅರಣ್ಯ ಇಲಾಖೆಯ ಸಿಬ್ಬಂಧಿಗೆ ಕೂಡಲೇ ಮರಗಳ ಟ್ರಿಮ್ಮಿಂಗ್ ಕಾರ್ಯವನ್ನು ನಿರ್ವಹಿಸುವಂತೆ ಸೂಚಿಸಿದರು. ಮತ್ತು Pathway ಗಳನ್ನು ದುರಸ್ಥಿ ಮಾಡಿಸುವಂತೆ ಪಾಲಿಕೆಯ ಯೋಜನಾ ವಿಭಾಗಕ್ಕೆ ಹಾಗೂ ತೋಟಗಾರಿಕಾ ಇಲಾಖೆಯ ಸಂತೋಷ್ ರವರಿಗೆ ಪತ್ರ ಬರೆಯುವಂತೆ ನೋಡಲ್ ಅಧಿಕಾರಿಗಳಿಗೆ ಸೂಚಿಸಿದರು.

10. **ಬಿ.ಡಿ.ಎ. ಬಡಾವಣೆ ಪ್ರದೇಶದಲ್ಲಿ ಅಳವಡಿಸಿರುವ Garbage Dustbin ತೆರವುಗೊಳಿಸುವ ಬಗ್ಗೆ:**

ದೊಮ್ಮಲೂರು ವಾರ್ಡಿನ ಬಿ.ಡಿ.ಎ. ಬಡಾವಣೆಯಲ್ಲಿ ಅಳವಡಿಸಿರುವ Garbage Dustbin ನಿಂದ ಈ ಪ್ರದೇಶದಲ್ಲಿ ಬಹಳ ತೊಂದರೆಯಾಗುತ್ತಿದ್ದು ಕೂಡಲೇ ಈ ಬಿನ್‌ಗಳನ್ನು ತೆರವುಗೊಳಿಸುವಂತೆ ದೊಮ್ಮಲೂರು ವಾರ್ಡ್ ನಿವಾಸಿಯಾದ ಕೃಷ್ಣ ರವರು ಕೋರಿದರು.

ಸದರಿ Garbage Dustbin ಗಳನ್ನು ಕೂಡಲೇ ತೆರವುಗೊಳಿಸಲು ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅನುಮೋದನೆಗೊಂಡ ಕೂಡಲೇ ತೆರವುಗೊಳಿಸಲಾಗುವುದು ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು, ಮಾನ್ಯ ಶಾಸಕರು ಸೂಚಿಸಿದರು ಆದಷ್ಟು ಬೇಗನೆ ತೆರವುಗೊಳಿಸಲು ಕ್ರಮವಹಿಸುವಂತೆ ಸೂಚಿಸಿದರು.

11. **ವಾರ್ಡಿನಲ್ಲಿ ಅಳವಡಿಸಿರುವ ನಾಮಫಲಕಗಳಲ್ಲಿ ಹೆಸರುಗಳನ್ನು ಹಾಕಿರುವ ಬಗ್ಗೆ ಮತ್ತು ಪಾರ್ಕ್ ಮತ್ತು ಪಾಲಿಕೆಯ ಜಾಗಗಳಿಗೆ ಹೆಸರುಗಳನ್ನು ನಾಮಕರಣ ಮಾಡುವ ಬಗ್ಗೆ.**

ಈ ಹಿಂದಿನ ಸಭೆಯಲ್ಲಿ ಚರ್ಚೆಯಾದ ನಾಮಕರಣದ ವಿಷಯವು ಇಂದಿನ ಸಭೆಯಲ್ಲಿ ಮತ್ತೆ ಚರ್ಚಿಸಲಾಯಿತು. ಮಾನ್ಯ ಶಾಸಕರು ದೊಮ್ಮಲೂರು ವಾರ್ಡಿನಲ್ಲಿ ಮಾಡಲಾಗಿರುವ ಎಲ್ಲಾ ನಾಮಕರಣಗಳ ವಿವರವನ್ನು ಮುಂದಿನ ಸಭೆಗೆ ಸಲ್ಲಿಸುವಂತೆ ಸೂಚಿಸಿದರು.

12. **ಮಾನ್ಯ ಶಾಸಕರು ವಾರ್ಡಿನಲ್ಲಿ ಎಲ್ಲೆಲ್ಲಿ ಸಾರ್ವಜನಿಕ ಶೌಚಾಲಯಗಳ ಅವಶ್ಯಕತೆ ಇರುತ್ತದೆ ಎಂಬ ಪಟ್ಟಿಯನ್ನು ಮತ್ತು ವಾರ್ಡಿನಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ಪಾದಚಾರಿ ಮಾರ್ಗಗಳ (Footpath) ಪಟ್ಟಿಯನ್ನು ಸಲ್ಲಿಸಿದಲ್ಲಿ ಸದರಿ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ಒದಗಿಸಲಾಗುವುದು ಎಂದು ಸಭೆಯಲ್ಲಿದ್ದ ಸಾರ್ವಜನಿಕರಿಗೆ ಮತ್ತು ಅದಿಕಾರಿಗಳಿಗೆ ತಿಳಿಸಿ, ಪಟ್ಟಿಯನ್ನು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಸಲ್ಲಿಸುವಂತೆ ಸೂಚಿಸಿದರು.**

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಹಾಜರಾಗಿದ್ದ ಮಾನ್ಯ ಶಾಸಕರಿಗೆ, ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 112 ದೊಮ್ಮಲೂರು
ಬಿ.ಬಿ.ಎಂ.ಪಿ

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 112 ದೊಮ್ಮಲೂರು ಮತ್ತು
ಸಹಾಯಕ ಕಾರ್ಯಪಾಲಕ ಅಭಿಯಂತರರು
ದೊಮ್ಮಲೂರು ಉಪ ವಿಭಾಗ
ಬಿ.ಬಿ.ಎಂ.ಪಿ

<u>ಪ್ರತಿಯನ್ನು:</u>

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.